the resolution of the Karnataka Slum Clearance Board. The matter is under correspondence with the Land-Lord.

ಶಾಸನ ರಚನೆ

ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕ, 1991
ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಯವರು) : ಮಾನ್ಯ ಉಪಾಧಕ್ಷಣೆಯವರೇ ನಾನು 1991ನೇ ಸಾಲಿನ ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷಣೇಯವರು: ಪ್ರಸ್ತಾಪ ಏನೆಂದರೆ 1991ನೇ ಸಾಲಿನ ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷಣೆಯವರೇ 1991ನೇ ಸಾಲಿನ ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷಣೇಯವರು: ವಿಧೇಯಕವನ್ನು ಮಂಡಿಸಲಾಗಿದೆ.

ಅನುಬಂಧ

ವಿತ್ತೀಯ ಕಾರ್ಯಕಲಾಪಗಳು

1991-92ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

+ ಶ್ರೀ ಆರ್. ದಯಾನಂದ ರಾವ್ (ಗಾಂಧಿನಗರ) : ಮಾನ್ಯ ಅಧ್ಯಕ್ಷರೇ, ನಾನು 1991-92ನೇ ಸಾಲಿನ ಆಯವ್ಯಯವನ್ನು ಸದನದಲ್ಲಿ ಮಂಡಿಸಿರುವುದನ್ನು ಸ್ವಾಗತಿಸುತ್ತಾ ನನ್ನ ಸಲಹೆಗಳನ್ನು ಕೊಡಲಿಕ್ಕೆ ಇಚ್ಛಿಪಡುತ್ತೇನೆ. ನಮ್ಮ ಮುಖ್ಯಮಂತ್ರಿಯವರು ಒಂದು ಒಳ್ಳೆಯ ಆಯವ್ಯಯವನ್ನು ಕರ್ನಾಟಕ ಜನರಿಗೆ ಕೊಟ್ಟಿದ್ದಾರೆ. ಇದರಲ್ಲಿ ಸಾಕಷ್ಟು ಬಡ ಜನರಿಗೆ ಒಳ್ಳೊಳ್ಳೆಯ ಯೋಜನೆಗಳನ್ನು ನಮ್ಮ ಸರ್ಕಾರ ಇವತ್ತು ಕೊಟ್ಟಿದೆ ಎಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಅದರಲ್ಲಿಯೂ ಸಹ ಇವತ್ತು ನಮ್ಮ ಮುಖ್ಯ ಮಂತ್ರಿಯವರು ಯೋಜನೆಗಳನ್ನು ಹಾಕಿಕೊಂಡು ಗ್ರಾಮಾಂತರ ಜನರಿಗೆ ಕಾರ್ಯಕ್ರಮವನ್ನು ಕೊಟ್ಟಿದ್ದಾರೆ.

ಇನ್ನು 1991-92ರ ಆಯವ್ಯಯದಲ್ಲಿ ಕೊರತೆಯ ಹಣವನ್ನು 56 ಕೋಟಿ ರೂಪಾಯಿಗೆ ಇಳಿಸಿ ಇವೊತ್ತಿನ ದಿವಸ ಒಂದು ಒಳ್ಳೆಯ ಬಜೆಟ್ಟನ್ನು ಕೊಟ್ಟಿದ್ದಾರೆ ಎಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ನಾನು ಮೊದಲನೆಯದಾಗಿ ಬೆಂಗಳೂರು ನಗರಾಭಿವೃದ್ಧಿಯ ಪರವಾಗಿ ಕೆಲವು ಸಲಹೆಗಳನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ಇವೊತ್ತು ಬೆಂಗಳೂರು ನಗರ ಸಿಕ್ಕಾಪಟ್ಟೆ ಬೆಳೆಯುತ್ತಿದೆ, ಇದನ್ನು ಸರ್ಕಾರ ಅದಷ್ಟು ತಡೆಗಟ್ಟಬೇಕಾಗಿದೆ. ಇದನ್ನು ತಡೆಗಟ್ಟದಿದ್ದರೆ ತುಂಬಾ ಕಷ್ಟವಾಗುತ್ತದೆ. ಇವೊತ್ತು ಬೆಂಗಳೂರು ನಗರದಲ್ಲಿ ನೀರಿನ ಬವಣೆ ಜಾಸ್ತಿಯಾಗುತ್ತಿದೆ. ಆದ್ದರಿಂದ, ಸುಮಾರು ಇವೊತ್ತು 40ರಿಂದ 50 ಲಕ್ಷ ಜನಸಂಖ್ಯೆಗೆ, ನೀರಿನ ವ್ಯವಸ್ತೆಯನ್ನು ಮಾಡಬೇಕಾಗಿದೆ.